


**ತನ್‌ಹಾಯಿ**
ಕವನ ಸಂಕಲನ
ಲೇ: ಎಚ್.ಎಸ್. ಮುಕ್ತಾಯಕ್ಕ
ಪು: 127 ಬೆ: 100
ಪ್ರ: ಆಶಿಯಾನಾ ಪ್ರಕಾಶನ, ರಾಯಚೂರು
ದೂರವಾಣಿ: 96119 33050

ಮುಕ್ತಾಯಕ್ಕನವರ 'ತನ್‌ಹಾಯಿ' ಸಂಕಲನದ ಕವಿತೆಗಳನ್ನು ಓದುತ್ತಿದ್ದರೆ ಅಕ್ಕನ ಅಕ್ಕನನ್ನೋ ತಂಗಿಯನ್ನೋ ಮಾತನಾಡಿಸಿದ ಅನುಭವವಾಗುತ್ತದೆ. ಇಲ್ಲಿನ ಗಜಲ್‌ಗಳ ಅಪ್ರತಿಮ ಚೆಲುವು ಕನ್ನಡ ಕಾವ್ಯದ ಚೆಲುವನ್ನು ಹೆಚ್ಚಿಸಿದೆ.

ಬೇಡ ಅವುಗಳಿಗೆ. ನದಿಯ ಜೀವಂತಿಕೆ, ಮಾರ್ದವ, ಆರ್ತತೆ, ಸೌಂದರ್ಯ, ಸ್ವಚ್ಛಂದತೆ ಎಲ್ಲವೂ ಮಾಂಸಲವಾಗಿ ಓದುಗರನ್ನು ಮುಟ್ಟಿ ಮೀಯಿಸುತ್ತವೆ.

ಈ ಎಲ್ಲವೂ ಮುಕ್ತಾಯಕ್ಕನವರ ಗಜಲ್‌ಗಳಲ್ಲಿ ಇವೆ ಎಂದೇ ಅವು ಕನ್ನಡದ ಕಾವ್ಯಾಸಕ್ತರನ್ನು ಎಂದಿಗೂ ಸೆಳೆದಿವೆ. ಹೀಗಿದ್ದೂ ಮುಕ್ತಾಯಕ್ಕನವರ ಕಾವ್ಯಕ್ಕೆ ಸಲ್ಲಬೇಕಾದ್ದು ಸಂದಿಲ್ಲ ಎನ್ನುವುದನ್ನು ಯಾರಾದರೂ ಒಪ್ಪಿಯೇ ಒಪ್ಪುತ್ತಾರೆ. ಅದರ ಚರ್ಚೆಯನ್ನು ಇನ್ನೊಮ್ಮೆ ಮಾಡಬಹುದು. ಈ ಸಂಕಲನ 'ತನ್‌ಹಾಯಿ' ಗಜಲ್‌ಗಳ ಮನೋಧರ್ಮಕ್ಕೆ ಹೇಳಿಮಾಡಿಸಿದಂಥದ್ದು. ಏಕಾಂತದ ಅನುಭವ ಸಾಮಾನ್ಯವಾಗಿ ಗಾಯದಂತೆ. ಕೆರೆದಷ್ಟೂ ಕೆರೆತ ಹೆಚ್ಚು. ಆದರೆ, ಈ ಸಂಕಲನದಲ್ಲಿ ಅದು ಗೋಳಲ್ಲ, ಸೋಲಲ್ಲ, ದುರಂತವಲ್ಲ. ಈ ಪಲುಕುಗಳು ಈ ಸಂಕಲನದಲ್ಲಿ ಇಲ್ಲವೆಂದಲ್ಲ, ಆದರವು ಸಂಚಾರಿ. ಸ್ಥಾಯಿ ಯಾವುದೆಂದರೆ, ಏಕಾಂತವೂ ಒಂದು ದಿವ್ಯಾನುಭವ. ಬದುಕನ್ನು, ಸಂಬಂಧಗಳನ್ನು, ಮನುಷ್ಯರನ್ನು 'ಏಕಾಂತ'ವು 'ಸಖ್ಯ'ದಷ್ಟೇ ಗಾಢವಾಗಿ ಪರಿಚಯಿಸುತ್ತದೆ.

ಕಳೆದುಹೋದ ಸಖ್ಯದ ನೆನಪಾದರೂ ಕಹಿ ಯಾಕಾಗಬೇಕು? ಅದು ಮೂರು ಗಳಿಗೆಯಾದರೂ ಬದುಕನ್ನು ಬೆಳಗಿದ್ದು ಸುಳ್ಳೆ? ಅದು ನನ್ನನ್ನು ಆವರಿಸಿದ್ದು ಸುಮ್ಮನೆಯೆ? ಮುಂದಿನ ಬದುಕಿಡೀ